ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1**

**ಸಂಖ್ಯೆ: ಇ-ಆಡಳಿತ ಶಿಕ್ಷಕರ ಮಾಹಿತಿ 01/2017-18** **ದಿನಾಂಕ: 27.05.2017**

**ವಿಶೇಷ ಗಮನಕ್ಕಾಗಿ**

# ಸುತ್ತೋಲೆ

ವಿಷಯ: ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರ ಸೇವಾ ಮಾಹಿತಿಗಳನ್ನು ನಮೂನೆಗಳಲ್ಲಿ ಮಾಹಿತಿಗಳನ್ನು ಭರ್ತಿ ಮಾಡುವ ಬಗ್ಗೆ.

ಸರ್ಕಾರಿ ಪ್ರೌಢ ಪ್ರಾಥಮಿಕ, ಶಾಲಾ ಶಿಕ್ಷಕರು ನಮೂನೆಯಲ್ಲಿ ಭರ್ತಿ ಮಾಡಿದ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ, ಸಂಬಳ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು (D.D.O's) ಮುಖ್ಯ ಶಿಕ್ಷಕರು/ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಈ ಕಛೇರಿಗೆ ದೂರವಾಣಿ ಮೂಲಕ ಸ್ಪಷ್ಟೀಕರಣವನ್ನು ಕೋರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಕೆಳಗೆ ನಮೂದಿಸಿದಂತೆ ಕ್ರಮವಹಿಸಲು ಈ ಮೂಲಕ ತಿಳಿಸಿದೆ.

- ಸರ್ಕಾರಿ ಪ್ರೌಢ, ಪ್ರಾಥಮಿಕ ಶಾಲಾ ಶಿಕ್ಷಕರ ನಮೂನೆಯಲ್ಲಿ ಕ್ರಮ ಸಂಖ್ಯೆ: 11. ಸೇವೆಗೆ ಸೇರಿದ ದಿನಾಂಕ: ಎಂದಿರುವಲ್ಲಿ ಪ್ರಸ್ತುತ ಹುದ್ದೆಗೆ ಸೇರಿದ ದಿನಾಂಕ ಎಂದು ಪರಿಗಣಿಸಿ. ತಂತ್ರಾಂಶದಲ್ಲಿ ಅಳವಡಿಸುವುದು.
- ಸರ್ಕಾರಿ ಪ್ರೌಢ, ಪ್ರಾಥಮಿಕ, ಶಾಲಾ ಶಿಕ್ಷಕರ ನಮೂನೆಯಲ್ಲಿರುವ ಸೇವೆಯ ವಿವರವನ್ನು ಸರ್ಕಾರಿ ಸೇವೆಗೆ ಸೇರಿದ ಪ್ರಾರಂಭದ ದಿನಾಂಕದಿಂದ ಧಾರಣೆ ಮಾಡಿದ ಎಲ್ಲಾ ಹುದ್ದೆಗಳ (ಬಡ್ತಿಯ ವಿವರಗಳ ಸಹಿತ) ಸೇವಾ ವಿವರಗಳನ್ನು ಶಾಲೆಯ ಡೈಸ್ ಕೋಡ್ ನೊಂದಿಗೆ ತಂತ್ರಾಂಶದಲ್ಲಿ ಅಳವಡಿಸುವುದು.
- ಈ ರೀತಿಯಲ್ಲಿ ತಂತ್ರಾಂಶದಲ್ಲಿ ಶಿಕ್ಷಕರ ಮಾಹಿತಿಯನ್ನು ಅಳವಡಿಸಿದ ನಂತರ ಪ್ರತಿ ಶಿಕ್ಷಕರ ಮಾಹಿತಿಯ ಪ್ರಿಂಟ್ ಪಡೆದು, ಪ್ರಸ್ತುತ ಹುದ್ದೆಗೆ ಸೇರಿದ ದಿನಾಂಕ ಮತ್ತು ಸರ್ಕಾರಿ ಸೇವೆಗೆ ಸೇರಿದ ದಿನಾಂಕವನ್ನು ಪರಿಶೀಲಿಸುವುದು.
- ಸರ್ಕಾರಿ ಸೇವೆಗೆ ಸೇರಿದ ಪ್ರಾರಂಭದ ದಿನಾಂಕದಿಂದ ಧಾರಣೆ ಮಾಡಿರುವ ಎಲ್ಲಾ ಹುದ್ದೆಗಳ ವಿವರಗಳು ತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ಸಂಬಳ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು (D.D.O's) ಮುಖ್ಯ ಶಿಕ್ಷಕರು/ಕ್ಷೇತ್ರಶಿಕ್ಷಣಾಧಿಕಾರಿಗಳು ಖಾತ್ರಿಪಡಿಕೊಳ್ಳುವುದು.
- ತಂತ್ರಾಂಶದಲ್ಲಿ ಅಳವಡಿಸಿದ ಶಿಕ್ಷಕರ ಮಾಹಿತಿಯಲ್ಲಿ ವ್ಯತ್ಯಾಸವಿದ್ದರೆ, ತಂತ್ರಾಂಶದಲ್ಲಿ ಲಭ್ಯ ಮಾಡುವ (EDIT OPTION) ಬದಲಾವಣೆ ಸೌಲಭ್ಯವನ್ನು ಉಪಯೋಗಿಸಿಕೊಂಡು, ಪ್ರತಿ ಶಿಕ್ಷಕರ ಮಾಹಿತಿಯನ್ನು ಸರಿಪಡಿಸುವುದು.

ಜಂಟಿ ನಿರ್ದೇಶಕರು (ಆಡಳಿತ)

**ಇವರಿಗೆ**

1. ನಿರ್ದೇಶಕರು. ಎಸ್.ಎಸ್.ಎ./ ಆರ್.ಎಂ.ಎಸ್.ಎ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
4. ಸಂಬಂದಪಟ್ಟ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.